4

# ಪ್ರಶ್ನೆ:

# “ಸಭೆಗಾಗಿ ಒಂದು ಮಾದರಿ ಇರುವುದೋ?”

## ಉತ್ತರ:

ವಿದ್ಯಾವಂತ ಪ್ರಸಂಗಿಗಳು ಹೊಸ ಒಡಂಬಡಿಕೆಯ ಪತ್ರಿಕೆಗಳು “ಪ್ರೇಮ ಪತ್ರಗಳ ಒಂದು ಸಂಗ್ರಹವಾಗಿದೆ ಮತ್ತು ಪ್ರೇಮ ಪತ್ರಗಳು ನಿಯಮಗಳನ್ನು ಒಳಗೊಂಡಿರುವದಿಲ್ಲ” ಎಂದು ಹೇಳುವದರಿಂದ ಯುವಜನರನ್ನು ಹಾಗೆಯೇ ಕೆಲವು ಜನ ಪ್ರಾಯಸ್ಥರನ್ನೂ ತಪ್ಪು ದಾರಿಗೆ ನಡೆಸಿದ್ದಾರೆ. ನಿಜವಾಗಿಯೂ, ಪ್ರೀತಿಯು ಇಡೀ ಹೊಸ ಒಡಂಬಡಿಕೆಯನ್ನು ತುಂಬಿಕೊಂಡಿರುತ್ತದೆ. ಆದರೆ ಕೆಲವೊಂದು “ನಿಯಮದಂತೆ” (ಗ್ರೀಕ: *kanon;* ಗಲಾತ್ಯ 6:16) ನಡೆಯುವವರಿಗೆ ಮಾತ್ರವೇ ಅದು ಆಶೀರ್ವಾದವನ್ನು ಸಾರುತ್ತದೆ.

“ಪ್ರೇಮ ಪತ್ರಗಳಲ್ಲಿ ನಿಯಮಗಳು ಇರುವದಿಲ್ಲ” ಎಂದು ಕೆಲವರು ಹೇಳುತ್ತಾರೆ, ಆದರೆ ಹೊಸ ಒಡಂಬಡಿಕೆಯ ಪ್ರೇಮ ಪತ್ರಗಳು “ಕ್ರಿಸ್ತನ ನಿಯಮದ ಮೇಲೆ” ಅವಲಂಭಿಸಿರುತ್ತವೆ (ಗಲಾತ್ಯ 6:2).

“ನಮಗೆ ಪ್ರೀತಿ ಇರಲಿ, ಬೋಧನೆ ಬೇಡ” ಎಂದು ಕೆಲವರು ಹೇಳುತ್ತಾರೆ. ಹೀಗಿದ್ದರೂ, ಒಬ್ಬ ಪ್ರೇರಿತ ಮನುಷ್ಯನು ಒಬ್ಬ ಯುವ ಪ್ರಸಂಗಿಗೆ “ಉಪದೇಶ ವನ್ನು” ಮಾಡುವದರಲ್ಲಿ “ಆಸಕ್ತನಾಗಿರು,” ಮತ್ತು “ಉಪದೇಶದ ವಿಷಯದಲ್ಲಿ ಎಚ್ಚರಿಕೆಯಾಗಿರು,” “ಹೀಗಿರುವದರಿಂದ ನಿನ್ನನ್ನೂ ನಿನ್ನ ಉಪದೇಶ ಕೇಳುವವರನ್ನೂ ರಕ್ಷಿಸುವಿ” ಎಂದು ಬರೆದಿದ್ದಾನೆ (1 ತಿಮೊಥೆ 4:13, 16; KJV).

ಒಂದು ಮಾದರಿ ವಿಚಾರವನ್ನು ಕೆಲವರು ಗೇಲಿ ಮಾಡುತ್ತಾರೆ. ಹಾಗಿದ್ದರೂ, ಬಟ್ಟೆ ಹೊಲಿಯುವ ಹೆಂಗಸು ಹೊಸ ಉಡುಪು ಸಿದ್ಧಪಡಿಸುವಲ್ಲಿ ಒಂದು ಮಾದರಿಯನ್ನು ಬಹಳ ಸಹಾಯಕವಾಗಿ ಕಂಡುಕೊಳ್ಳುತ್ತಾಳೆ. ಶಾಲಾ ಬಾಲಕನು, ಅಕ್ಷರಗಳನ್ನು ಬರೆಯಲು ಕಲಿಯುವದರಲ್ಲಿ ತನ್ನ ಶಿಕ್ಷಕ ತನಗೆ ಒದಗಿಸುವ ಮಾದರಿಯನ್ನು ಪ್ರತಿ ಮಾಡಿಕೊಳ್ಳುತ್ತಾನೆ. ಕ್ರೈಸ್ತರು “ತನ್ನ ಹೆಜ್ಜೆ ಜಾಡಿನಲ್ಲಿ ನಡೆಯಬೇಕೆಂದು” ಯೇಸುವು ಒಂದು “ಮಾದರಿಯನ್ನು” ತೋರಿಸಿದ್ದಾನೆ (1 ಪೇತ್ರ 2:21).

### ಹಳೇ ಒಡಂಬಡಿಕೆಯಲ್ಲಿ ದೇವರು – ಕೊಟ್ಟ ಮಾದರಿಗಳು

ಕೆಲವು ಆಧುನಿಕ ಪ್ರಸಂಗಿಗಳು “ಮಾದರಿ ದೈವಜ್ಞಾನ ಶಾಸ್ತ್ರ” ಎಂದು ಖಂಡಿಸುವಂಥದ್ದನ್ನು ಪ್ರಾರಂಭಿಸಿದವರು ಹಳೇ ಪದ್ಧತಿಯ ಪ್ರಸಂಗಿಗಳಲ್ಲ ಆದರೆ ದೇವರೇ ಪಾರಂಭಿಸಿದನು. ಹೇಬೆಲನ ಸಮಯದಲ್ಲಿ ಆರಾಧನೆಗಾಗಿ ದೇವರು ಒಂದು ಮಾದರಿಯನ್ನು ಕೊಟ್ಟನು. ಹೇಬೆಲನು ನಂಬಿಕೆಯಿಂದ ತನ್ನ ಯಜ್ಞವನ್ನು ಅರ್ಪಿಸಿದ್ದರಿಂದ (ಇಬ್ರಿಯ 11:4), ಮತ್ತು ದೇವರ ವಾಕ್ಯವನ್ನು ಕೇಳುವದರಿಂದ

ನಂಬಿಕೆಯು ಬರುವದರಿಂದ (ರೋಮಾಪುರ 10:17), ದೇವರು ಪ್ರಾಣಿ ಯಜ್ಞಗಳನ್ನು ನೇಮಿಸಿದನು, ಸಸ್ಯವನ್ನಲ್ಲ ಎಂಬುದು ಸ್ಪಷ್ಟವಾಗುತ್ತದೆ (ಆದಿಕಾಂಡ 4:4).

ಹೀಗೆ ಪ್ರಾಣಿ ಮತ್ತು ರಕ್ತದ ಅರ್ಪಣೆಗಳ ಮಾದರಿಯು ಪ್ರಾರಂಭಗೊಂಡಿತು. ನೋಹನಿಂದ, ಅಬ್ರಹಾಮನಿಂದ, ಇಸಾಕನಿಂದ ಮತ್ತು ಯಾಕೋಬನಿಂದ ಈ ಮಾದರಿಯು ಮುಂದುವರಿಸಲ್ಪಟ್ಟಿತು (ಆದಿಕಾಂಡ 8:20; 12:7, 8; 26:23-25; 31:54). ಇಸ್ರಯೇಲಿನೊಂದಿಗೆ ಮೋಶೆಯ ಒಡಂಬಡಿಕೆಯಲ್ಲಿ ರಕ್ತ ಯಜ್ಞಗಳು ಅವಶ್ಯವಾಗಿದ್ದವು (ಯಾಜಕಕಾಂಡ 16:1-34). "ತನ್ನ ಸ್ವಂತ ರಕ್ತದ ಮುಖಾಂತರ" ಆತನು "ಲೋಕದ ಪಾಪವನ್ನು ತೆಗೆದುಕೊಂಡು ಹೋಗುವ ದೇವರ ಕುರಿಮರಿಯಾಗಿರುವಂತೆ" ಯೇಸುವಿಗಾಗಿ ಒಂದು ಮಾನವ "ದೇಹವು" "ಸಿದ್ಧಪಡಿಸಲ್ಪಟ್ಟಾಗ" ಈ ಪದ್ಧತಿಯು ಅಂತಿಮ ಸ್ಥಿತಿಯನ್ನು ತಲುಪಿತು (ಯೋಹಾನ 1:29; ಇಬ್ರಿಯ 9:12; 10:5).

ನಾವೆಯನ್ನು ಕಟ್ಟುವದಕ್ಕಾಗಿ ನಿರ್ದಿಷ್ಟವಾದ ನಿರ್ದೇಶನಗಳನ್ನು ನೋಹನಿಗೆ ಕೊಟ್ಟವನು ದೇವರಾಗಿದ್ದನು: ಯಾವ ಜಾತಿಯ ಕಟ್ಟಿಗೆ, ಅಳತೆಗಳು, ಅಂತಸ್ತುಗಳ ಸಂಖ್ಯೆ, ಕಿಟಿಕಿಗಳ ಮತ್ತು ಇತ್ಯಾದಿ. ನೋಹನು ಮಾದರಿಯನ್ನು ಅನುಸರಿಸಿದ್ದರಿಂದ ಅಭಿನಂದಿಸಲ್ಪಟ್ಟನು (ಆದಿಕಾಂಡ 6:14-16, 22). ಮೋಶೆಯ ಗುಡಾರವನ್ನು ಕಟ್ಟುವದರಲ್ಲಿ ದೇವರಿಂದ ಅವನಿಗೆ ಕೊಡಲ್ಪಟ್ಟ "ಮಾದರಿಯಿಲ್ಲದೇ" (*tabhnith* ಹಿಬ್ರುವಿನಲ್ಲಿ; *tupos* ಗ್ರೀಕಿನಲ್ಲಿ) ಕೆಲಸ ಮಾಡಲಿಲ್ಲ (ವಿಮೋಚನಕಾಂಡ 25:9, 40; 26:30; ಇಬ್ರಿಯ 8:5).

ಹಾಗೆಯೇ, ಕರ್ತನು "ಆತ್ಮನಿಂದ," ದೇವಾಲಯಕ್ಕಾಗಿ ದಾವೀದನಿಗೆ ನೀಲ ನಕ್ಷೆಯನ್ನು ಕೊಟ್ಟನು (1 ಪೂರ್ವಕಾಲವೃತ್ತಾಂತ 28:12). ದಾವೀದನು, "ಆ ನಕ್ಷೆಗಳಲ್ಲಿ ಸೂಚಿಸಿದ ಎಲ್ಲಾ ಕೆಲಸಗಳ ವಿಷಯವಾದ ಜ್ಞಾನವು ತನಗೆ ಯೆಹೋವನ ಲೇಖನದಿಂದಲೇ ಪ್ರಾಪ್ತವಾಯಿತು" ಎಂದು ಹೇಳಿದನು (1 ಪೂರ್ವಕಾಲವೃತ್ತಾಂತ 28:19).

ದಾವೀದನು ತಾನೇ ದೇವಾಲಯವನ್ನು ಕಟ್ಟಲು ಅಪ್ಪಣೆ ಹೊಂದಲಿಲ್ಲ, ಆದರೆ "ನಾನು ನನ್ನಿಂದಾಗುವಷ್ಟು" "ಒದಗಿಸಿದ್ದೇನೆ" ಎಂದು ಹೇಳಿದನು (1 ಪೂರ್ವಕಾಲವೃತ್ತಾಂತ 29:2). ತನ್ನ ಮಗ ಸೊಲೊಮೋನನಿಗೆ ನೀಲನಕ್ಷೆಯನ್ನು ಕೊಡುವದರ ಮೊದಲು, ಕಲ್ಲುಗಳನ್ನು ನೇಮಿಸಿದ ಅಳತೆಗಳಲ್ಲಿ ಕಡಿಸಿ, "ಕಲ್ಲುಗಣಿಯಲ್ಲಿ ಸಿದ್ಧಪಡಿಸಿದ್ದನು" (1 ಪೂರ್ವಕಾಲವೃತ್ತಾಂತ 28:11; 1 ಅರಸುಗಳು 6:7). "ಕಟ್ಟುವ ದಿವಸಗಳಲೆಲ್ಲಾ ಸುತ್ತಿಗೆ, ಉಳಿ ಮುಂತಾದ ಕಬ್ಬಿಣದ ಸಾಮಾನುಗಳ ಪದವು ಕೇಳಿಸಲಿಲ್ಲ" (1 ಅರಸುಗಳು 6:7). ಅಷ್ಟು ಜಾಗರೂಕತೆಯಿಂದ ಸೊಲೊಮೋನನು ಮಾದರಿಯನ್ನು ಅನುಸರಿಸಿದನು.

## ಹೊಸ ಒಡಂಬಡಿಕೆಯಲ್ಲಿ ದೇವರು – ಕೊಟ್ಟ ಮಾದರಿ

ದೇವರು ಯಾವಾಗಲು ತನ್ನ ಜನರಿಗೆ ಅನುಸರಿಸಲು ಒಂದು ಮಾದರಿಯನ್ನು ಕೊಡುತ್ತಾನೆ. ಆತನು ಸೊಲೊಮೋನನ ದೇವಾಲಯಕ್ಕೆ ಶಿಲ್ಪಿಯಾದಂತೆ, ಆತನು ಇನ್ನೊಂದು ದೇವಾಲಯಕ್ಕೆ "ಸೊಲೊಮೋನನಿಗಿಂತ ಹೆಚ್ಚು ದೊಡ್ಡವನಾಗಿರುವ ಒಬ್ಬಾತನಿಂದ" ಕಟ್ಟಲ್ಪಟ್ಟದ್ದಕ್ಕೆ ಶಿಲ್ಪಿಯಾಗಿದ್ದಾನೆ (ಮತ್ತಾಯ 12:42). ಯೇಸುವು ತಾನು ಪ್ರಾಕೃತಿಕ ಕಟ್ಟಡವನ್ನು, ಒಂದು ದೇವಾಲಯ ಕಟ್ಟಡವನ್ನು ("ಬಹಿರಂಗ ಆರಾಧನೆಗಾಗಿ ಒಂದು ಮಂದಿರವನ್ನು ಕಟ್ಟುವೆನೆಂದು ಹೇಳಲಿಲ್ಲ"), ಆದರೆ ಜನರಿಂದ ಮಾಡಲ್ಪಟ್ಟ ಕಟ್ಟಡವನ್ನು ಕಟ್ಟುತ್ತೇನೆಂದು ಹೇಳಿದನು. ಅದರ ಬಗ್ಗೆ "ನೀವು … ದೇವರ ಕಟ್ಟಡವೂ ಆಗಿದ್ದೀರಿ" (1 ಕೊರಿಂಥ 3:9) ಎಂದು ಬರೆಯಲ್ಪಡುವುದು. ಆದುದರಿಂದ

ಯೇಸುವಿನ ಆಲಯವು "ಬಹು ಬೆಲೆಯುಳ್ಳ ಕಲ್ಲುಗಳಿಂದ" ಇಲ್ಲವೇ "ಕೇದಾರಿನ ಕಟ್ಟಿಗೆಗಳಿಂದ" (1 ಅರಸುಗಳು 5:17; 6:10) ಕಟ್ಟಲ್ಪಡಲಿಲ್ಲ, ಆದರೆ "ಜೀವಿಸುವ ಕಲ್ಲುಗಳಿಂದ" (1 ಪೇತ್ರ 2:5) ಕಟ್ಟಲ್ಪಟ್ಟಿತು. "ಪ್ರೀತಿಯು" "ಸಮಸ್ತವನ್ನು ಸಂಪೂರ್ಣ ಮಾಡುವ ಬಂಧವಾಗಿದೆ" (ಕೊಲೊಸ್ಸೆ 3:14).

ಎಂಥಾ "ಕಟ್ಟಡ"! "ನಾವು ಜೀವಸ್ವರೂಪನಾದ ದೇವರ ಮಂದಿರವಾಗಿದ್ದೇವಲ್ಲಾ. ಇದರ ಸಂಬಂಧವಾಗಿ ದೇವರು - ನಾನು ಅವರಲ್ಲಿ ವಾಸಿಸುತ್ತಾ ತಿರುಗಾಡುವೆನು" ಎಂದು ಹೇಳಿದ್ದಾನೆ ಎಂದು ಎಲ್ಲಾ ಕ್ರೈಸ್ತರು ಒಟ್ಟಾಗಿ ಹೇಳುವ ಭಾಗ್ಯ ಹೊಂದಿದ್ದಾರೆ (2 ಕೊರಿಂಥ 6:16; ನೋಡಿರಿ ಎಫೆಸ 2:20-22). "ದೇವರ ಅಲಯವು ಪರಿಶುದ್ಧ ವಾದದ್ದು, ಆ ಆಲಯವು ನೀವೇ" (1 ಕೊರಿಂಥ 3:17) ಎಂದು ಪೌಲನು ಕ್ರೈಸ್ತರಿಗೆ ಬರೆದನು.

ಆಶ್ಚರ್ಯಕರವಾಗಿ, ಕ್ರೈಸ್ತರು ಒಂದುಗೂಡಿ ಕರ್ತನ ಆಲಯವಾಗಿರುವದಷ್ಟೇ ಅಲ್ಲ, ಆದರೆ ಒಬ್ಬೊಬ್ಬರಾಗಿಯೂ ಆಲಯವಾಗಿದ್ದಾರೆ: ಪ್ರತಿಯೊಬ್ಬ ಕ್ರೈಸ್ತನ ಪ್ರಕೃತಿಕ ದೇಹವು "ಪರಿಶುದ್ಧಾತ್ಮನ ಆಲಯವಾಗಿರುವುದು" (1 ಕೊರಿಂಥ 6:19).

ಈ ಅದ್ಭುತಕರವಾದ ಕಟ್ಟಡಕ್ಕಾಗಿ ನೀಲನಕ್ಷೆ ಇರುವುದೋ? ಹೇಬೆಲನ ಯಜ್ಞ, ನೋಹನ ನಾವೆ, ಮೋಶೆಯ ದೇವದರ್ಶನ ಗುಡಾರ, ಮತ್ತು ಸೊಲೊಮೋನನ ದೇವಾಲಯಕ್ಕೆ ಪರಲೋಕದಿಂದ ನಿರ್ದೇಶನಗಳು ಬಂದಂತೆ ಸಾಮಾನ್ಯವಾಗಿ "ಸಭೆ" ಎಂದು ಕರೆಯಲ್ಪಡುವ ದೇವರ ಆತ್ಮಿಕ ಆಲಯಕ್ಕಾಗಿ ವಿವರಣೆಗಳು ಕೊಡಲ್ಪಟ್ಟಿವೆ. ಆ ವಿವರಣೆಗಳು ಕ್ರಿಸ್ತನ ಅಪೊಸ್ತಲರಿಗೆ ಪರಲೋಕದಿಂದ ಕಳುಹಿಸಲ್ಪಟ್ಟಿವೆ. ಕ್ರೈಸ್ತತ್ವದ "ಪ್ರಾರಂಭದ" ನಿರೀಕ್ಷೆಯಲ್ಲಿ (ಕ್ರಿ.ಶ. 30, ಅಪೊಸ್ತಲರ ಕೃತ್ಯಗಳು 2:1-47; 11:15), ಯೇಸುವು ಸಭೆಗಾಗಿ ತಂದೆಯ ಮಾದರಿಯನ್ನು ಹನ್ನೆರಡು ಜನರಿಗೆ ಸಾರಿದನು. "ಭೂಲೋಕದಲ್ಲಿ ನೀವು ಏನು ಕಟ್ಟುತ್ತೀರೋ ಅದು ಪರಲೋಕದಲ್ಲಿಯು ಕಟ್ಟಿರುವದು [ಗ್ರೀಕ: *estai dedemena*]; ಮತ್ತು ಭೂಲೋಕದಲ್ಲಿ ನೀವು ಏನು ಬಿಚ್ಚುತ್ತೀರೋ ಅದು ಪರಲೋಕದಲ್ಲಿಯೂ ಬಿಚ್ಚಿರುವದು [ಗ್ರೀಕ: *estai lelumena*]" (ಮತ್ತಾಯ 18:18).

ಅಪೊಸ್ತಲರು ಯಾವುದನ್ನಾದರೂ ಹೇಳುವದಕ್ಕಿಂತ ಇಲ್ಲವೇ ಬರೆಯುವದಕ್ಕಿಂತ ಮೊದಲು, ಅವರು ಹೇಳುವಂಥದ್ದು ಇಲ್ಲವೇ ಬರೆಯುವಂಥದ್ದು, ಪಂಚಾಶತ್ತಮ ದಿನದಂದು ಯೆರೂಸಲೇಮಿನಲ್ಲಿ ಅಪೊಸ್ತಲರಿಗೆ ತಂದೆಯು ಕಳುಹಿಸಲಿಕ್ಕಿದ್ದ ಪರಿಶುದ್ಧಾತ್ಮನಿಗೆ ಪರಲೋಕದಲ್ಲಿ ತಂದೆಯಿಂದ ಆಗಲೇ ಹೇಳಲ್ಪಟ್ಟಿತು (ಯೋಹಾನ 14:26; ಅಪೊಸ್ತಲರ ಕೃತ್ಯಗಳು 1:8; 2:1-4). "ಆತ್ಮನು ತನ್ನಷ್ಟಕ್ಕೆ ತಾನೇ" ಯಾವುದನ್ನೂ ಹೇಳುವದಿಲ್ಲ; ತಂದೆಯು ಹೇಳುವದನ್ನು ಆತನು ಕೇಳಿಸಿಕೊಂಡಂತೆ, ಈ ಸಂಗತಿಗಳನ್ನು "ಎಲ್ಲಾ ಸತ್ಯದೊಳಗೆ" ಅಪೊಸ್ತಲರನ್ನು ನಡಿಸಲು ಆತನು "ಮಾತಾಡುವನು" (ಯೋಹಾನ 16:13).

"ಹೊಸ ಸೃಷ್ಟಿಯ" (ಮತ್ತಾಯ 19:28) ಎಲ್ಲಾ ಸಮಯದಲ್ಲಿ "ರಾಯಭಾರಿಗಳಾಗಿ" ಅಪೊಸ್ತಲರು "ಹನ್ನೆರಡು ಸಿಂಹಾಸನಗಳ" ಮೇಲೆ ಕುಳಿತುಕೊಳ್ಳುವರು. "ಲೋಕಾಂತ್ಯದ ವರೆಗೆ" ಅವರಿಗೆ "ಪರಲೋಕದಿಂದ" "ಅಧಿಕಾರ" ಇರುವುದು (ಮತ್ತಾಯ 18:18; 28:20; 2 ಕೊರಿಂಥ 5:20; ನೋಡಿರಿ 1 ಥೆಸಲೊನೀಕ 2:6; ASV). ಕ್ರಿ.ಶ. 30ರ ಪಂಚಾಶತ್ತಮದ ದಿನದಿಂದ ಕ್ರಿಸ್ತನ ಎರಡನೆಯ ಬರೋಣದವರೆಗಿನ ಮಧ್ಯದಲ್ಲಿ "ಸತ್ಯದ ಆತ್ಮನ ಮತ್ತು ಸುಳ್ಳಿನ ಆತ್ಮದ" (1 ಯೋಹಾನ 4:6) ಮಧ್ಯದಲ್ಲಿ ಭಿನ್ನತೆ ಮಾಡಲು ಒಂದೇ ಒಂದು ಮಾರ್ಗವು "ಅಪೊಸ್ತಲರ

ಬೋಧನೆಗೆ'' ತಿರುಗುವುದಾಗಿದೆ (ಅಪೊಸ್ತಲರ ಕೃತ್ಯಗಳು 2:42). ಇದು ಭೂಮಿಯ ಮೇಲೆ ಅಪೊಸ್ತಲರ ಬೋಧನೆಯು ದೊರೆಯಬಹುದಾದ ಒಂದೇ ಸ್ಥಳವು ಹೊಸ ಒಡಂಬಡಿಕೆಯ ಇಪ್ಪತ್ತೇಳು ಪುಸ್ತಕಗಳು. ತಂದೆಯ ಚಿತ್ತದಿಂದ ಮತ್ತು ಜ್ಞಾನದಿಂದ ಹೊಸ ಒಡಂಬಡಿಕೆಯು ಸಂಪೂರ್ತಿಯಾದದ್ದೂ, ಬದಲಾಗದೇ ಇರವಂಥದ್ದೂ ಮತ್ತು ಅಂತಿಮವಾದದ್ದೂ ಆಗಿರುತ್ತದೆ (2 ತಿಮೊಥೆ 3:17; 2 ಪೇತ್ರ 1:3; ಗಲಾತ್ಯ 1:8, 9; ಯೂದ 3).

## ದೇವರಿಂದ – ಕೊಡಲ್ಪಟ್ಟ ಮಾದರಿಗಳು ತಿರಸ್ಕರಿಸಲ್ಪಟ್ಟವು

ಮೊದಲನೆಯ ಶತಮಾನದ ಸಭೆಯನ್ನು ಪುನಸ್ಥಾಪಿಸಲು ಪ್ರಯತ್ನಿಸುವಲ್ಲಿ ಹೊಸ ಒಡಂಬಡಿಕೆಗೆ ಹೋಗುವ ವಿಚಾರದ ಬಗ್ಗೆ ಕೆಲವರು ಗೇಲಿ ಮಾಡುತ್ತಾರೆ. ''ಯಾವ ಸಭೆಯನ್ನು ನೀವು ಪುನಃರೂಪಿಸುವದನ್ನು ಬಯಸುವಿರಿ? ಸುವಾರ್ತೆಯ ಆಸಕ್ತಿಯನ್ನು ಕಳೆದುಕೊಂಡ ಯೆರೂಸಲೇಮ ಸಭೆಯನ್ನೋ? ಇಲ್ಲವೇ ಬಹಿರಂಗದ ವ್ಯಭಿಚಾರದೊಂದಿಗೆ ಮತ್ತು ಸಭೆಯ ಕರ್ತನ ಭೋಜನ ಆರಾಧನೆಯಲ್ಲಿ ಕುಡಿಕತನವುಳ್ಳ ಕೊರಿಂಥ ಸಭೆಯನ್ನು ಪುನಃಸ್ಥಾಪಿಸುವಿರೋ?''

ಪ್ರಥಮ ಶತಮಾನದ ಪ್ರತಿಯೊಂದು ಸಭೆಯಲ್ಲಿ ದೇವರು ಏನನ್ನು ಒಪ್ಪಿಕೊಂಡನು ಮತ್ತು ಏನನ್ನು ಮನ್ನಿಸಲಿಲ್ಲ ಎಂಬುದನ್ನು ಹೊಸ ಒಡಂಬಡಿಕೆಯು ಸ್ಪಷ್ಟಪಡಿಸುತ್ತದೆ. ಒಳ್ಳೆಯ ಮತ್ತು ಕೆಟ್ಟ ಉದಾಹರಣೆಗಳನ್ನು ಅದು ನಮಗೆ ಹೇಳುತ್ತದೆ, ಮತ್ತು ಸರಳವಾದ, ಸಾಮಾನ್ಯಜನರು ''ಒಳ್ಳೆಯದನ್ನು ಕೆಟ್ಟದನ್ನೂ ವಿವೇಚಿಸುವ ರೀತಿಯಲ್ಲಿ ಅದು ಬರೆಯಲ್ಪಟ್ಟಿದೆ'' (ಇಬ್ರಿಯ 5:14).

ದೇವರು ಪ್ರಾರಂಭದಿಂದ ಮಾನವರಿಗಾಗಿ ಮಾದರಿ - ಕೈಕೊಳ್ಳುವವರಾಗಿ ದೇವರು ಯೋಚಿಸಿದ್ದರೂ, ಪ್ರಾರಂಭದಿಂದ ಮಾದರಿ - ತಿರಸ್ಕರಿಸುವವರು ಕಾಯಿನನಿಂದ ಪ್ರಾರಂಭಿಸಿ ಕಂಡುಬಂದಿದ್ದಾರೆ (ಆದಿಕಾಂಡ 4:5-7). ಪುನಃ ಪುನಃ ಮನುಷ್ಯನ ಗರ್ವವು ''ತನ್ನ ಸ್ವಂತ ಕಣ್ಣಿನಲ್ಲಿ ಸರಿಯಾದದ್ದನ್ನು'' ಮಾಡುತ್ತ, (ನ್ಯಾಯಸ್ಥಾಪಕರು 21:25) ಪರಲೋಕದ ನಿರ್ದೇಶನಗಳನ್ನು ತಿರಸ್ಕರಿಸುವಂತೆ ಅವನನ್ನು ನಡಿಸಿದೆ. ''ಮನುಷ್ಯನ ಮಾರ್ಗವು ಅವನಲ್ಲಿಯೇ ಇರುವದಿಲ್ಲ,'' ಮನುಷ್ಯನು ತನ್ನ ಹೆಜ್ಜೆಗಳನ್ನು ನಿರ್ದೇಶಿಸಲು ಸಾಮರ್ಥ್ಯವಿಲ್ಲದವನಾಗಿದ್ದಾನೆ ಎಂದು ಯೆರೆಮೀಯನು ಪ್ರಸಂಗಿಸಿದನು (ಯೆರೆಮೀಯ 10:23). ''ಮನುಷ್ಯನು ಎಲ್ಲಾ ಸಂಗತಿಗಳ ಅಳತೆಗೋಲಾಗಿದ್ದಾನೆ'' ಎಂದು ಮಾನವ ಹಟಮಾರಿತನವು ವಾದಿಸುತ್ತದೆ.[1]

''ನಿಮ್ಮನ್ನು ನೀವೇ ಬುದ್ಧಿವಂತರೆಂದು ಎಣಿಸಿಕೊಳ್ಳಬೇಡಿರಿ'' ಎಂಬುದು ಅಪೊಸ್ತಲಿಕ ಎಚ್ಚರಿಕೆಯಾಗಿದೆ (ರೋಮಾಪುರ 12:16). ಇದು ಸಾಮಾನ್ಯವಾಗಿ ಕಡೆಗಣಿಸಲ್ಪಟ್ಟಿದೆ. ಮಾನವನ ಸ್ವಂತ ತಿಳುವಳಿಕೆಯು ಹೀಗೆ ಬರೆಯಲು ಮಾನವತಾ ವಾದಿಗಳನ್ನು ನಡೆಸಿತು: ''ದೇವವಾದಕ್ಕೆ ಸಮಯವು ದಾಟಿ ಹೋಗಿದೆ''[2]; ''ಯಾವ ದೇವರೂ ನಮ್ಮನ್ನು ರಕ್ಷಿಸುವದಿಲ್ಲ; ನಾವು ನಮ್ಮನ್ನು ರಕ್ಷಿಸಿಕೊಳ್ಳಬೇಕು.''[3]

ಕೆಲವರು, ದೇವರು ಅಸ್ತಿತ್ವದಲ್ಲಿದ್ದಾನೆಂದು ನಂಬುವಾಗಲೂ ಸಹ, ಕ್ರಿಸ್ತನನ್ನು ತಿರಸ್ಕರಿಸುತ್ತಾರೆ ''ರಕ್ಷಣೆಯು ಯೇಸುವಿನ ಮುಖಾಂತರ ಮಾತ್ರವೇ ಸಾಧ್ಯ'' ಎಂಬ ಹೇಳಿಕೆಯು ''ಸ್ವನೀತಿ'' ಆಗಿದೆ ಎಂದು ಅವರು ತಿಳಿಯುತ್ತಾರೆ.

ಇತರರು, ದೇವರು ಅಸ್ತಿತ್ವದಲ್ಲಿದ್ದಾನೆ ಮತ್ತು ರಕ್ಷಣೆಯು ಕ್ರಿಸ್ತನ ಮುಖಾಂತರವೇ ಮಾತ್ರ ಎಂದು ನಂಬುತ್ತೇವೆ ಎಂದು ಹೇಳಿಕೊಂಡರೂ, ಸುವಾರ್ತೆಗೆ ವಿಧೇಯರಾಗಲು ಮಾದರಿಯನ್ನು ತಿರಸ್ಕರಿಸುತ್ತಾರೆ (2 ಥೆಸಲೊನೀಕ 1:7-9).[4] ಒಬ್ಬ ಸುವಾರ್ತಾ

ಪ್ರಸಂಗಿ ಎಂದು ಹೇಳಿಕೊಂಡವನು, "ಪ್ರಾಮಾಣಿಕವಾಗಿ ಬಾಪ್ತಿಸ್ಮ ಹೊಂದಿದವನು, ನಿತ್ಯವಾಗಿ ರಕ್ಷಿಸಲ್ಪಡುವನು ಎಂದು ನನಗೆ ದೃಢತೆಯಿದೆ" ಎಂದು ಬರೆದಿದ್ದಾನೆ.

ಇನ್ನು ಇತರರು, ಎಲ್ಲಾ ಮಾದರಿಗಳನ್ನು ತಿರಸ್ಕರಿಸಿ, ಯಾರೂ ನಶಿಸಿ ಹೋಗುವದಿಲ್ಲ ಎಂದು ನಂಬುತ್ತಾರೆ. ದೇವರು ಯಾರನ್ನೂ ನರಕಕ್ಕೆ ಕಳುಹಿಸದಷ್ಟು ಒಳ್ಳೆಯವನೂ ಪ್ರೀತಿಸುವವನೂ ಆಗಿದ್ದಾನೆ ಎಂಬ ಕಲ್ಪನೆಯ ಮೇಲೆ ತಮ್ಮ ಪ್ರಾಣಗಳನ್ನು ಗಂಡಾಂತರಕ್ಕಿಟ್ಟು ಕೊಳ್ಳುತ್ತಿದ್ದಾರೆ.

"ದೇವರಿಗೆ ಎದುರು ಮಾತಾಡುವದಕ್ಕೆ ನೀನು ಎಷ್ಟರವನು?" (ರೋಮಾಪುರ 9:20ಬಿ; NRSV).

## ಮುಕ್ತಾಯ

ದೇವರು ನಮಗಾಗಿ ಇಂದು ಒಂದು ಮಾದರಿಯನ್ನು ಒದಗಿಸಿದ್ದಾನೆ. ತನ್ನ ಶಿಕ್ಷಕನ ಮಾರ್ಗದರ್ಶನಗಳನ್ನು ಕಡೆಗಣಿಸಿ ಅರ್ಥವಿಲ್ಲದೇ ಗೀಚುವ ಮಗುವಿನಂತೆ ನಾವಾಗಿರಬಾರದು. ನಾವು ಏನಾಗಿರಬೇಕೆಂದು ದೇವರು ಉದ್ದೇಶಿಸಿರುವನೋ ಅಂಥ ಮಾದರಿಯನ್ನು ಕೈಕೊಳ್ಳುವವರಾಗಿರೋಣ. ಯಾರೂ ನಾಶವಾಗಬಾರದು, ಆದರೆ ಎಲ್ಲರೂ ಮಾನಸಾಂತರಕ್ಕೆ ಬರಬೇಕು ಎಂಬುದು ಆತನ ಉದ್ದೇಶವಾಗಿದೆ (2 ಪೇತ್ರ 3:9).

---

ಟಿಪ್ಪಣಿಗಳು

[1]ಈ ಹೇಳಿಕೆಯು ಕ್ರಿ.ಪೂ. ಐದನೆಯ ಶತಮಾನದ ಗ್ರೀಕ ತತ್ವಜ್ಞಾನಿ ಪ್ರೊಟಾಗೊರಸನಿಗೆ ಸಂಬಂಧಿಸಲ್ಪಟ್ಟಿದೆ. [2]"Humanist Manifesto I," *The New Humanist* (May/June 1933); reprinted in Paul Kurtz, ed., *Humanist Manifestos I and II* (Buffalo, N.Y.: Prometheus Books, 1973), 8. [3]"Humanist Manifesto II," *The Humanist* (September/October 1973); reprinted in Paul Kurtz, ed., *Humanist Manifestos I and II* (Buffalo, N.Y.: Prometheus Books, 1973), 16. [4] ರೋಮಾಪುರ 6:17ನ್ನು ರೋಮಾಪುರ 6:3, 4ರಲ್ಲಿನ "ನಿಮಗೆ ಒಪ್ಪಿಸಲ್ಪಟ್ಟ ಬೋಧನೆಗೆ" ಎಂಬುದರ ವಿವರಣೆಯೊಂದಿಗೆ ಓದಿರಿ.

© 2009 Truth for Today